O.S.No. 484.2015                              P W -2

ದಿನಾಂಕ 04.09.2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು : 3 ನೇ ಪ್ರತಿವಾದಿ ಪರ ವಕೀಲರಿಂದ :</u>

ವಾದಿಯವರು ಒಟ್ಟು ಕುಟುಂಬದ ಆಸ್ತಿಯಲ್ಲಿ ಭಾಗ ಬೇಕು ಎಂದು ದಾವೆ ಹಾಕಿದ್ದಾರೆ. ವಾದಿಯವರು ಸರ್ವೆ ನಂ. 62/28, 62/33, 69 ರ ಸ್ವತ್ತುಗಳಿಗೆ ದಾವೆ ಹಾಕಿದ್ದಾರೆ. ವಾದಿ ಪ್ರತಿವಾದಿಯವರು ಈ ಸ್ವತ್ತುಗಳನ್ನು ಹೊಂದಿರುವ ಬಗ್ಗೆ ಮಾತ್ರ ನನಗೆ ಮಾಹಿತಿ ಇದೆ. ನಾನು ವಾದಿಯವರ ಪಕ್ಕದ ಜಮೀನಿನವನು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ. ವಾದಿಯವರ ತಂದೆಯ ಹೆಸರು ಕರಿಯಪ್ಪ. ಕರಿಯಪ್ಪ ನವರು ತಂದೆಯ ಹೆಸರು ಚಿಕ್ಕೇಗೌಡ ಅಲಿಯಾಸ್ ಚಲುವೇಗೌಡ ಎಂದರೆ ಸರಿ. ಅವರಿಗೆ 3 ಜನ ಮಕ್ಕಳು. ಕರಿಯಪ್ಪ, ಚಲುವೇಗೌಡ, ಚಿಕ್ಕೇಗೌಡ. ಅವರಿಗೆ 7 ಜನ ಮಕ್ಕಳು ಎಂದರೆ ಇರಬಹುದು ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳನ್ನು ಒಟ್ಟು ಕುಟುಂಬದ ಆಸ್ತಿಗಳಾಗಿವೆ. 5 ನೇ ವಾದಿ ನನ್ನ ಅತ್ತೆಯ ಮಗ. ನಾನು ಕಮಲಾಪುರದಲ್ಲಿ ವಾಸ ವಾಗಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ನ್ಯಾಯಾಲಯದಲ್ಲಿ ನೀಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಕ್ರಯ ಪತ್ರಗಳನ್ನು ಯಾರು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. 07.07.1972 ಸರ್ವೆ ನಂ. 69/23 ರಲ್ಲಿ 25 ಗುಂಟೆ ಯನ್ನು 1 ನೇ ವಾದಿಯ ತಂದೆ 3 ನೇ ಪ್ರತಿವಾದಿಯ ತಂದೆಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. 11.10.2001 ರಲ್ಲಿ ಸರ್ವೆ ನಂ. 62/9 ರಲ್ಲಿ 15 ವರೆ ಗುಂಟೆ, 69/30 ರಲ್ಲಿ 9 ವರೆ ಗುಂಟೆಯನ್ನು 1 ನೇ ಪ್ರತಿವಾದಿಯ ತಂದೆ 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಮಾರಾಟ ಮಾಡಿದ್ದ ಜಮೀನುಗಳನ್ನು ಮಾತ್ರ ದಾವೆಯಲ್ಲಿ ಹಾಕಿ ಉಳಿಕೆ ಜಮೀನುಗಳ ಮೇಲೆ ದಾವೆ ಹಾಕಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯೇ ದಾವಾ ಸ್ವತ್ತುಗಳ ಸ್ವಾಧೀನದಲ್ಲಿದ್ದು ಉಳುಮೆ ಮಾಡುತ್ತಿದ್ದಾರೆ

ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತುಗಳ ಬಗ್ಗೆ ಮಾಹಿತಿ ಇಲ್ಲ, ನಾನು ಪರುವಯ್ಯನಪಾಳ್ಯ ಗ್ರಾಮದಲ್ಲಿದ್ದು, ಕಮಲಾಪುರ ಗ್ರಾಮದಲ್ಲಿ ವಾಸವಾಗಿಲ್ಲ ಎಂದರೆ ಸರಿಯಲ್ಲ. ವಾದಿಗೆ ಅನುಕೂಲವಾಗುವ ಉದ್ದೇಃಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲು : 2 ನೇ ಪ್ರತಿವಾದಿ ಪರ ವಕೀಲರಿಂದ :</u>

ಈ ದಾವೆಯನ್ನು ಕರಿಯಪ್ಪ ನವರ ಕುಟುಂಬಸ್ಥರು ಕೃಷ್ಣ , ಚೆಲುವ ರವರ ಮೇಲೆ ವಿಭಾಗಕ್ಕಾಗಿ ಹಾಕಿದ್ದಾರೆ. ಈ ಜಮೀನಿನ ಮೂಲ ಮಾಲೀಕರು ಚಿಕ್ಕೇಗೌಡ ಉ. ಚೆಲುವೇಗೌಡ. ಚಿಕ್ಕೇಗೌಡ ಉ. ಚೆಲುವೇಗೌಡ ರವರ ಮಗ ಚಲುವ ರವರಿಗೆ ಒಬ್ಬನೇ ಮಗ. 2 ನೇ ಪ್ರತಿವಾದಿಯರ ತಂದೆ ಚಲುವರವರಿಗೆ ರಾಜು ಎಂಬ ಮತ್ತೊಬ್ಬ ಮಗ ಇದ್ದ ಎಂದರೆ ಸರಿಯಲ್ಲ. ರಾಜುರವರು ಮರಣ ಹೊಂದಿದ್ದು, ಅವರಿಗೆ ಇಬ್ಬರು ಮಕ್ಕಳು ಎಂದರೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ತಂದೆ ಚಲುವ ರವರಿಗೆ ಇನ್ನು ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಎಂದರೆ ಗೊತ್ತಿಲ್ಲ. ಅವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿದ್ದಾರೆ. ನನಗೆ ನ್ಯಾಯಾಲಯದಿಂದ ಸಾಕ್ಷಿ ಹೇಳಲು ನೋಟಿಸ್ ಬಂದಿರುವುದಿಲ್ಲ. ನನ್ನ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆ ನ್ಯಾಯಾಲಯದಲ್ಲಿ ನೀಡಿಲ್ಲ. ನನ್ನ ಮುಖ್ಯ ವಿ ಚಾರಣಾ ಪ್ರಮಾಣ ಪತ್ರವನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. 2 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ಕ್ರಯ ಪತ್ರ ಮಾಡಿಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ವಾದಿಗಳು ನನ್ನ ಸಂಬಂಧಿಕರಾದ ಕಾರಣ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಮುಗಿಯಿತು.</u>**

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ